ಓ. ಎಸ್.  ನಂಬರ:- 86/2022

ಡಿ.ಡಬ್ಲೂ-:-1 : ಸಿದ್ದರಾಮ ತಂದೆ ಹಣಮಂತ ಪೂಲಾರಿ

ದಿನಾಂಕ:-   13-03-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲು</u> : <u>ಶ್ರೀ    ಎಸ್ ಎಸ್ ಪಿ   ವಕೀಲರಿಂದ</u>.

ಸರ್ವೆ ನಂಬರ ೪೭೨/೯ ರ ೪ ಎಕರೆ ೧೨ ಗುಂಟೆ ದಾವಾ ಜಮೀನು ಕರಜಗಿಯಲ್ಲಿ ಇದೆ ಎಂದರೆ ಸರಿ. ಸರ್ವೆ ನಂಬರ ೪೭೪/೩ ರ ೫ ಎಕರೆ ೧೦ ಗುಂಟೆ ದಾವಾ ಜಮೀನೂ ಕೂಡಾ ಕರಜಗಿ ಗ್ರಾಮದಲ್ಲಿದೆ ಎಂದರೆ ಸರಿ. ನನ್ನ ತಂದೆ ಹಣಮಂತರವರು ದಿನಾಂಕ 25-10-2022 ರಂದು ಮೃತರಾಗಿರುತ್ತಾರೆ ಎಂದರೆ ಸರಿ. ದಾವಾ ಜಮೀನುಗಳು ನಮ್ಮ ಹಿರಿಯರ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆಯ ಆಸ್ತಿಗಳಾಗಿರುತ್ತವೆ ಎನ್ನುತ್ತಾರೆ. ನನ್ನ ಅಜ್ಜನ ಹೆಸರು ಚಂದ್ರಶಾ ಆಗಿರುತ್ತದೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುವುದಿಲ್ಲ. ದಾವಾ ಆಸ್ತಿಗಳು ನಮ್ಮ ತಂದೆಗೆ ನನ್ನ ಅಜ್ಜನಾದ ಚಂದ್ರಶಾರವರಿಂದ ಬಂದಿರುತ್ತವೆ ಎಂದರೆ ನನಗೆ ಗೊತ್ತಿಲ್ಲ. ನನ್ನ ತಂದೆಗೆ ೩ ಜನ ಮಕ್ಕಳು ಇರುತ್ತೇವೆ ಎಂದರೆ ಸಾಕ್ಷಿಯು ೪ ಜನ ಇದ್ದು, ಅದರಲ್ಲಿ ನನ್ನ ಸಹೋದರ ಪ್ರಕಾಶ ಮೃತರಾಗಿರುತ್ತಾರೆ ಎನ್ನುತ್ತಾರೆ. ಸದರಿ ಪ್ರಕಾಶರವರಿಗೆ ಹೆಂಡತಿ ಮತ್ತು ಒಬ್ಬ ಮಗಳು ಇರುತ್ತಾರೆ. ಹೆಂಡತಿಯ ಹೆಸರು ಮಹಾನಂದ ಮತ್ತು ಮಗಳ ಹೆಸರು ಅಂಬಿಕಾ ಇರುತ್ತದೆ. ಸಾಕ್ಷಿಯು ಈಗ ಪ್ರಕಾಶರವರ ಹೆಂಡತಿ ಮಹಾನಂದ ಕೂಡಾ ಮೃತರಾಗಿರುತ್ತಾರೆ ಎನ್ನುತ್ತಾರೆ.

೨. ವಾದಿ ಮತ್ತು ೨ನೇ ಪ್ರತಿವಾದಿ ನನ್ನ ಸಹೋದರರಾಗಿರುತ್ತಾರೆ. ದಾವಾ ಆಸ್ತಿಗಳು ನನ್ನ ಅಜ್ಜನಿಂದ ಬಂದಿದ್ದರೂ ಸಹ ಮತ್ತು ಸದರಿ ವಿಚಾರ ನನಗೆ ಗೊತ್ತಿದ್ದರೂ ಸಹ ನನಗೆ ಅದು ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆಗೆ ವಯಸ್ಸಾಗಿದ್ದು, ಅವರಿಗೆ ಆರೋಗ್ಯ ಸರಿ ಇರಲಿಲ್ಲ ಮತ್ತು ಅವರನ್ನು ಕರೆದುಕೊಂಡು ಹೋಗಿ ಒಂದು ಸುಳ್ಳು ದಾನ ಪತ್ರ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಮ್ಮ ತಂದೆಗೆ ಬಲಗಾಲು ಮತ್ತು ಕೈಯಿಗೆ ಮಾತ್ರ ಲಕ್ವಾ ಹೊಡೆದಿತ್ತು, ಅವರು ಆರೋಗ್ಯವಾಗಿಯೆ ಇದ್ದರು ಎನ್ನುತ್ತಾರೆ. ನಾನು ಮಹಾರಾಷ್ಟ್ರದ ಅಕ್ಕಲಕೋಟ ತಾಲೂಕಿನ ಗುರಾ ವಾಡಿ ಗ್ರಾಮದಲ್ಲಿ ವಾಸ ಇರುತ್ತೇನೆ.

೩. ನನ್ನ ಪ್ರತಿವಾದ ಪತ್ರದಲ್ಲಿರುವ ವಿಚಾರಗಳು ನನಗೆ ಗೊತ್ತು. ನಮ್ಮ ತಂದೆಗೆ ಸಾಲ ಇದ್ದ ಕುರಿತು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಮ್ಮ ತಂದೆಗೆ ಲಕ್ವಾ ಹೊಡೆದು ಅವರನ್ನು ನಾನೆ ನೋಡಿಕೊಳ್ಳುತ್ತಿದ್ದೆ ಮತ್ತು ಚಿಕಿತ್ಸೆ ಕೊಡಿಸುತ್ತಿದ್ದೆ ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಗೆ ಪಾಲು ನೀಡಬಾರದು ಎಂಬ ಉದ್ದೇಶದಿಂದ ಒಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆ ದಾನಪತ್ರ ಮಾಡಲು ವಾದಿ ಮತ್ತು ೨ನೇ ಪ್ರತಿವಾದಿ ಮತ್ತು ನನ್ನ ಮೃತ ಸಹೋದರ ಪ್ರಕಾಶರವರ ಮಗಳು ಒಪ್ಪಿಗೆ ನೀಡಿರುತ್ತಾರೆ. ಅವರೆಲ್ಲ ಒಪ್ಪಿಗೆ ನೀಡಿದ ಬಗ್ಗೆ ದಾನ ಪತ್ರದಲ್ಲಿ ಅವರ ಸಹಿಗಳು ಇರುವುದಿಲ್ಲ. ನನಗೆ ಅವರು ಯಾರೂ ದಾನಪತ್ರ ಮಾಡಿಕೊಳ್ಳಲು ಒಪ್ಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ವಾದಿಗೆ ಆಸ್ತಿ ನೀಡಬಾರದು ಎಂಬ ಉದ್ದೇಶದಿಂದ ಒಂದು ಸುಳ್ಳು ಪ್ರತಿವಾದ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ : ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಅಫಜಲಪೂರ.